## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ನಡ್ಜ್ ಫೌಂಡೇಷನ್ ಸಂಸ್ಥೆ ಬೆಂಗಳೂರು ಇವರು ಮುಖ್ಯಮಂತ್ರಿಗಳ ಕರ್ನಾಟಕ ಕೌಶಲ್ಯ ಯೋಜನೆಯಡಿಯಲ್ಲಿ ಸಲ್ಲಿಸಿದ ತರಬೇತಿ ಕಾರ್ಯಕ್ರಮಗಳಿಗೆ ಮಂಜೂರಾತಿಯನ್ನು ನೀಡುವ ಬಗ್ಗೆ.

ಓದಲಾಗಿದೆ:

1. ಏಪ್ರಿಲ್ 2017 ರ ದಿ ನಡ್ಜ್ ಫೌಂಡೇಷನ್ ಸಂಸ್ಥೆ ಬೆಂಗಳೂರು ರವರ ತರಬೇತಿ ಕಾರ್ಯಕ್ರಮಗಳ ಪ್ರಸ್ತಾವನೆ.
2. ಮಿಷನ್ ನಿರ್ದೇಶಕರು, ಕೆಎಸ್‌ಆರ್‌ಎಲ್‌ಪಿಎಸ್ ಸಂಖ್ಯೆ: ಡಿಡಿಯು-ಜಿಕೆವೈ/ಎಸ್.ಡಿ.ಇ&ಎಲ್. ಇಲಾಖೆ/1/ಇ.ಸಿ/2017-18 ದಿನಾಂಕ: 28.04.2017ರಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಶಿಫಾರಸ್ಸು.
3. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 02.05.2017 ಹಾಗೂ 22.08.2017ರ ನಡವಳಿಗಳ ಕಂಡಿಕೆ ಸಂಖ್ಯೆ ಕ್ರಮವಾಗಿ: 5.1 ಮತ್ತು 5ರ ತರಬೇತಿ ಕಾರ್ಯಕ್ರಮಗಳ ಅನುಮೋದನೆ.
4. ದಿ ನಡ್ಜ್ ಫೌಂಡೇಷನ್ ಸಂಸ್ಥೆ ಬೆಂಗಳೂರು ಇವರ ಪತ್ರ ದಿನಾಂಕ: 12.09.2017
5. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 26.09.2017ರ ನಡವಳಿಗಳ ಕಂಡಿಕೆ ಸಂಖ್ಯೆ: 4ರ ತರಬೇತಿ ಕಾರ್ಯಕ್ರಮಗಳ ಅನುಮೋದನೆ.
6. ಆರ್ಥಿಕ ಇಲಾಖೆಯು ಅಧಿಸೂಚನೆ ಸಂಖ್ಯೆ: ಅಇ 607 ವೆಚ್ಚ 12/17, ದಿನಾಂಕ: 06.07.2017ರಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಕೌಉಜಿಇ 311 ಕೈತಇ 2017, ದಿನಾಂಕ: 23.08.2017.
8. ಸಿಎಂಕೆಕೆವೈ ಸರ್ಕಾರಿ ಆದೇಶದ ಸಂಖ್ಯೆ: ಕೌಉಜಿಇ 49 ಕೈತಶಿ (ಭಾಗ-1), ದಿನಾಂಕ: 08.05.2017.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ (1) ರಲ್ಲಿ ದಿ ನಡ್ಜ್ ಫೌಂಡೇಷನ್ ಸಂಸ್ಥೆಯಿಂದ ಮುಖ್ಯಮಂತ್ರಿಗಳ ಕರ್ನಾಟಕ ಕೌಶಲ್ಯ ಯೋಜನೆಯಡಿಯಲ್ಲಿ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಗೆ ಮಿಷನ್ ನಿರ್ದೇಶಕರು, ಕೆ.ಎಸ್.ಆರ್.ಎಲ್.ಪಿ.ಎಸ್. ದಿನಾಂಕ: 28.04.2017ರ ಶಿಫಾರಸ್ಸನ್ನು ಪರಿಗಣಿಸಿ ಪ್ರಸ್ತಾವನೆಯನ್ನು ದಿನಾಂಕ: 02.05.2017ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ಸಲ್ಲಿಸಿದ್ದು, ಸದರಿ ಅಧಿಕಾರಯುಕ್ತ ಸಮಿತಿಯ ನಡವಳಿ 5.1 ರನ್ವಯ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ ಕೆಟಿಪಿಪಿ ಕಾಯ್ದೆ 1999ರ ಕಲಂ 4(ಜಿ) ಯಡಿ ವಿನಾಯತಿ ಪಡೆಯಲು ಶಿಫಾರಸ್ಸು ಮಾಡಿತು. ಸರ್ಕಾರಿ ಆದೇಶ ಸಂಖ್ಯೆ: ಕೌಉಜಿಇ 248 ಕೈತಇ 2017, ದಿನಾಂಕ: 14.08.2017 ರಲ್ಲಿ ನೀಡಿರುವ ಆರ್ಥಿಕ ಅಧಿಕಾರವನ್ನು ಚಲಾಯಿಸಿ ದಿನಾಂಕ: 22.08.2017 ರಂದು ನಡೆದ ಅಧಿಕಾರಯುಕ್ತ ಸಮಿತಿಯು ಅನುಮೋದನೆ ನೀಡುತ್ತಾ ಪಿಎಂಕೆವಿವೈ ಯೋಜನೆಯಡಿ ನಿಗದಿಪಡಿಸಿದ ಶೆಡ್ಯೂಲಿನಂತೆ ಕಂತುಗಳಲ್ಲಿ ತರಬೇತಿ ಸಂಸ್ಥೆಗಳಿಗೆ ಹಣವನ್ನು ಪಾವತಿ ಮಾಡುವ ನಿಬಂಧನೆಗಳೊಂದಿಗೆ ಅನುಷ್ಠಾನಗೊಳಿಸಲು ನಿರ್ಣಯಿಸಿತು. ದಿ ನಡ್ಜ್ ಫೌಂಡೇಷನ್ ಸಂಸ್ಥೆ ಬೆಂಗಳೂರು ದಿನಾಂಕ: 12.09.2017ರ ತಮ್ಮ ಪತ್ರದಲ್ಲಿ ಡಿಡಿಯು-ಜಿಕೆವೈ ಅಡಿ ನಿಗದಿಪಡಿಸಿದ ಶೆಡ್ಯೂಲ್‌ನಂತೆ ಕಂತುಗಳಲ್ಲಿ ಹಣ ಬಿಡುಗಡೆ ಮಾಡಲು ಕೋರಿರುತ್ತಾರೆ. ಇದನ್ನು ಪರಿಗಣಿಸುತ್ತಾ

ದಿನಾಂಕ: 26.09.2017ರಂದು ನಡೆದ ಅಧಿಕಾರಯುಕ್ತ ಸಮಿತಿಯ ನಿರ್ಣಯ ಸಂಖ್ಯೆ: 4ರಂತೆ ಡಿಡಿಯು-ಜಿಕೆವೈ ಹಣ ಪಾವತಿಯ ನಿಬಂಧನೆಗಳ ಪ್ರಕಾರ ಹಣ ಪಾವತಿ ಮಾಡಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ. ಈ ಪ್ರಸ್ತಾವನೆಗೆ ಮೇಲೆ ಓದಲಾದ ಕ್ರಮಸಂಖ್ಯೆ (5)ರ ದಿನಾಂಕ: 26.09.2017ರ ನಡವಳಿಯ ಕಂಡಿಕೆ (4) ರಲ್ಲಿ ಅನುಮೋದಿಸಿ ***ಅನುಬಂಧ-1*** ರಲ್ಲಿ ತರಬೇತಿ ಕೇಂದ್ರವಾರು ಆರ್ಥಿಕ ಮತ್ತು ಭೌತಿಕ ಗುರಿಗಳಿಗೆ ಅನುಷ್ಠಾನಗೊಳಿಸಲು ತಿಳಿಸಿದೆ.

ಆರ್ಥಿಕ ಇಲಾಖೆಯು ಈ ಸಂಸ್ಥೆಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ಯಡಿ ಮೇಲೆ ಓದಲಾದ (6) ರಲ್ಲಿ ಒಟ್ಟು 5650 ಅಭ್ಯರ್ಥಿಗಳಿಗೆ 36.09 ಕೋಟಿ ರೂಪಾಯಿಗಳ (ಮೂವತ್ತಾರು ಕೋಟಿ ಒಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಮೊತ್ತದಲ್ಲಿ ತರಬೇತಿಯನ್ನು ನೀಡಲು ವಿನಾಯಿತಿಯನ್ನು ನೀಡಿದೆ.

ಆದ್ದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂ: ಕೌಉಜೀಇ 141 ಕೈತಇ 2017, ಬೆಂಗಳೂರು, ದಿನಾಂಕ: 09.10.2017**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ದಿ ನಡ್ಜ್ ಫೌಂಡೇಷನ್ ಸಂಸ್ಥೆ, ನಡ್ಜ್‌ವಿಲ್ಲೆ, ಸಿ-9, 1ನೇ 'ಸಿ' ಮುಖ್ಯ ರಸ್ತೆ, ಎಂಸಿಹೆಚ್‌ಎಸ್ ಕಾಲೋನಿ, ಸೆಕ್ಟರ್-6, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು-560102. ವೃತ್ತಿ ತರಬೇತಿ ಸಂಸ್ಥೆಗೆ ದಿನಾಂಕ: 23-08-2017ರಲ್ಲಿನ ಸರ್ಕಾರಿ ಸುತ್ತೋಲೆಯ ಮೂಲಕ ಹೊರಡಿಸಿದ ವೃತ್ತಿ ತರಬೇತಿ ಸಂಸ್ಥೆಗಳು/ತರಬೇತಿ ಕೇಂದ್ರಗಳಿಗೆ ಗುರಿಗಳ ಹಂಚಿಕೆ, ಅಭ್ಯರ್ಥಿಗಳ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ ಮತ್ತು ಉದ್ಯೋಗ ನಿಯುಕ್ತಿ ಹಾಗೂ ಉದ್ಯೋಗ ನಿಯುಕ್ತಿ ನಂತರದ ಅನುಸರಣೆ ಕುರಿತು ವಿಧಾನಗಳ **(Procedure for Allocation of Targets to Training providers (TP), Training Centres (TCs), Training Assessment, Certification and Placement and Post Placement of Candidates)** ಮಾರ್ಗಸೂಚಿಯನ್ನು ಅನುಸರಿಸಿ ***ಅನುಬಂಧ-1*** ರಲ್ಲಿ ನಮೂದಿಸಿದ ತರಬೇತಿ ಸಂಸ್ಥೆಗಳಲ್ಲಿ ಅವುಗಳ ಎದುರಿಗೆ ನಮೂದಿಸಿದ ಉದ್ಯೋಗ ವೃತ್ತಿ ತರಬೇತಿಗಳನ್ನು ಕೈಗೊಳ್ಳಲು **ಒಟ್ಟು 5650 ಅಭ್ಯರ್ಥಿಗಳಿಗೆ 36.09 ಕೋಟಿ ರೂಪಾಯಿಗಳ (ಮೂವತ್ತಾರು ಕೋಟಿ ಒಂಬತ್ತು ಲಕ್ಷ ರೂಪಾಯಿಗಳು ಮಾತ್ರ)** ತರಬೇತಿ ವೆಚ್ಚವನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ವಾಹಿನಿ-1 ರಡಿ ಲೆಕ್ಕ ಶೀರ್ಷಿಕೆ 2230-02-101-0-09 ಕೌಶಲ್ಯ ಅಭಿವೃದ್ಧಿ ಮಿಷನ್ ಅಡಿಯಲ್ಲಿ ಭರಿಸಲು ಮತ್ತು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

## ಷರತ್ತು ಮತ್ತು ನಿಬಂಧನೆಗಳು

1. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ನಿರ್ದೇಶಕರು, ಕೌಶಲ್ಯ ಮಿಷನ್ ಮತ್ತು ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಸಹಾಯದೊಂದಿಗೆ ಈ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುವರು.

2. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಮಾರ್ಗಸೂಚಿಗಳನ್ವಯ ತರಬೇತಿ ವೆಚ್ಚದ ಮೊತ್ತವನ್ನು ನಿರ್ಧರಿಸಲಾಗಿದೆ. ಒಡಂಬಂಡಿಕೆ (Memorandam of Understanding) ಪತ್ರಕ್ಕೆ ಸಹಿ ಹಾಕುವ ಮುನ್ನ ಇನ್ನೊಮ್ಮೆ ಉದ್ಯೋಗ ವೃತ್ತಿವಾರು ವೆಚ್ಚಗಳನ್ನು ಪರಿಶೀಲಿಸುವುದು.

3. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮಾರ್ಗಸೂಚಿಗಳನ್ನು ಮೇಲೆ ಓದಲಾದ ಕ್ರ. ಸಂ. (8)ರಲ್ಲಿ ಹೊರಡಿಸಲಾಗಿದ್ದು, ಸದರಿ ಮಾರ್ಗಸೂಚಿಯಲ್ಲಿ ವಿವಿಧ ವರ್ಗಗಳಿಗೆ ಒಟ್ಟು ತರಬೇತಿ ಅಭ್ಯರ್ಥಿಗಳಿಗೆ ನಿಗಧಿಪಡಿಸಿದಂತೆ ಶೇಕಡವಾರು ಮೀಸಲಾತಿಯನ್ನು ಅನುಸರಿಸುವುದು. kaushalkar.com ವೆಬ್ ಪೋರ್ಟಲ್‌ನಲ್ಲಿ ನೋಂದಾಯಿಸಿದ ಅಭ್ಯರ್ಥಿಗಳ ಪಟ್ಟಿಯಿಂದ ಅನುಬಂಧದಲ್ಲಿನ ತರಬೇತಿ ಕಾರ್ಯಕ್ರಮಗಳಿಗೆ ಅಭ್ಯರ್ಥಿಗಳ ಆಯ್ಕೆಯನ್ನು ಕೈಗೊಳ್ಳುವುದು.

4. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಡಿಡಿಯು-ಜಿಕೆವೈಯಡಿ ಹೊರಡಿಸಿದ ಕಾರ್ಯಕ್ರಮ ಮಾರ್ಗಸೂಚಿಗಳ ಕಂಡಿಕೆ 5.9 ಮತ್ತು ತಖ್ತೆ 6ರಲ್ಲಿ ಸಂಸ್ಥೆಗಳಿಗೆ ಬಿಡುಗಡೆ ಮಾಡುವ ಷರತ್ತುಗಳನ್ವಯ ಕಂತುಗಳಲ್ಲಿ ಪಾವತಿ ಮಾಡುವ ವಿಧಾನದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದು.

5. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಸೂಚನೆ ಸಂಖ್ಯೆ 53/2017 (ಜೆ-17060/06/2014ಆಜೀವಿಕಾಸ್ಕಿಲ್ಸ್/ಡಿಡಿಯು-ಜಿಕೆವೈ), ದಿನಾಂಕ:18-09-2017 ರಲ್ಲಿ ತಿಳಿಸಿದಂತೆ 30 ದಿನಗಳಲ್ಲಿ ತರಬೇತಿ ಸಂಸ್ಥೆಯ ತರಬೇತಿ ಕೇಂದ್ರಗಳು ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಸ್ಥಾಪಿತವಾಗಿರುವ ಬಗ್ಗೆ ವರದಿಯನ್ನು ನಡ್ಜ್ ಫೌಂಡೇಶನ್ ಸಂಸ್ಥೆಯವರು ಸಲ್ಲಿಸಬೇಕು. ನಂತರ ತಾಲ್ಲೂಕು ಮಟ್ಟದ ತಪಾಸಣಾ ಸಮಿತಿಯಿಂದ 10 ದಿನಗಳಲ್ಲಿ ತಪಾಸಣೆಯನ್ನು ಕೈಗೊಂಡು ಜಿಲ್ಲಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು ಬ್ಯಾಚ್‌ವಾರು ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು.

6. ಸರ್ಕಾರದ ಸುತ್ತೋಲೆ ಸಂಖ್ಯೆ: ಕಾಉಜೀಇ 311 ಕೌತಇ 2017, ದಿನಾಂಕ: 23.08.2017ರಲ್ಲಿನ **ಅನುಬಂಧ 3** ರಲ್ಲಿನ ಒಡಂಬಡಿಕೆಯ (ಎಂಒಯು) ಐಟಂ 5.5 ರಲ್ಲಿನ ಹಣ ಪಾವತಿ ನಿಬಂಧನೆಗಳನ್ನು ಮತ್ತು **ಅನುಬಂಧ-6** ರಲ್ಲಿನ ಗುತ್ತಿಗೆ ಪತ್ರದ ಐಟಂ 3ರಲ್ಲಿನ ಹಣ ಪಾವತಿ ನಿಬಂಧನೆಗಳ ಬದಲಿಗೆ ಕಂಡಿಕೆ 4ರ ಅಂಶಗಳನ್ನು ಅಳವಡಿಸಿಕೊಳ್ಳುವುದು.

7. **"ವೃತ್ತಿ ತರಬೇತಿ ಸಂಸ್ಥೆಗಳು/ತರಬೇತಿ ಕೇಂದ್ರಗಳಿಗೆ ಗುರಿಗಳ ಹಂಚಿಕೆ, ಅಭ್ಯರ್ಥಿಗಳ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ ಮತ್ತು ಉದ್ಯೋಗ ನಿಯುಕ್ತಿ ಹಾಗೂ ಉದ್ಯೋಗ ನಿಯುಕ್ತಿ ನಂತರ ಅನುಸರಣೆ ಕುರಿತು ವಿಧಾನಗಳ" (Procedure for Allocation of Targets to Training providers (TP), Training Centres (TCs), Training Assessment, Certification and Placement and Post Placement of Candidates)** ಮಾರ್ಗಸೂಚಿಯನ್ನು ಅನುಸರಿಸಿ ಉಸ್ತುವಾರಿ ಮಾಹಿತಿ ವ್ಯವಸ್ಥೆಯನ್ನು **(MIS)** ತಯಾರಿಸಿ ಗುತ್ತಿಗೆ ಮುಗಿಯುವವರೆಗಿನ ಎಲ್ಲಾ ಪ್ರಕ್ರಿಯೆಗಳ ಉಸ್ತುವಾರಿಯನ್ನು ಕೈಗೊಳ್ಳುವುದು.

8. ವೃತ್ತಿ ತರಬೇತಿ ಸಂಸ್ಥೆಯು ಮಂಜೂರಾದ ವಿವಿಧ ಉದ್ಯೋಗ ವೃತ್ತಿಗಳಲ್ಲಿ ತರಬೇತಿಯನ್ನು ಹೊಂದುವ ಅಭ್ಯರ್ಥಿಗಳ ಮೌಲ್ಯಮಾಪನ ಮತ್ತು ಪ್ರಮಾಣೀಕರಣವನ್ನು (Assessment and Certification) ಸಂಬಂಧಪಟ್ಟ ವಲಯ ಕೌಶಲ್ಯ ಪರಿಷತ್ತುಗಳು ಪಟ್ಟಿ ಮಾಡಿದ ಮೌಲ್ಯ ಮಾಪನ ಏಜೆನ್ಸಿಗಳ ಮೂಲಕ ಕೈಗೊಳ್ಳುವುದು.

೯. ವೃತ್ತಿ ತರಬೇತಿ ಸಂಸ್ಥೆಯು ಅನುಬಂಧದಲ್ಲಿ ತರಬೇತಿ ತಂಡವಾರು ನಮೂದಿಸಿದ ತರಬೇತಿಯ ಅವಧಿಯ ಪ್ರಕಾರವೇ ತರಬೇತಿಯನ್ನು ಕೈಗೊಳ್ಳುವುದು. ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಮಾತ್ರ ಇದರಲ್ಲಿನ ಅಂಶಗಳು ಜಾರಿಯಲ್ಲಿರುತ್ತವೆ. ಒಂದು ವೇಳೆ ಈ ಅವಧಿಯನ್ನು ಮೀರಿದ್ದಲ್ಲಿ ಮತ್ತೆ ಹೊಸದಾಗಿ ಅಧಿಕಾರಯುಕ್ತ ಸಮಿತಿಯಿಂದ ಅನುಮೋದನೆಯನ್ನು ಪಡೆಯುವುದು.

೧೦. ವೃತ್ತಿ ತರಬೇತಿ ಸಂಸ್ಥೆಯು kaushalkar.com ವೆಬ್ ಪೋರ್ಟಲ್‌ನಲ್ಲಿ ಎಲ್ಲಾ ತರಬೇತಿ ಕೇಂದ್ರಗಳ ನೋಂದಣಿಯನ್ನು ಕಡ್ಡಾಯವಾಗಿ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಎ&ಇ), ಜಿ&ಎಸ್.ಎಸ್.ಎ), ಇ &ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ.
3. ನಿರ್ದೇಶಕರು ಕರ್ನಾಟಕ ಕೌಶಲ್ಯ ಮಿಷನ್ ಉದ್ಯೋಗ ಮತ್ತು ತರಬೇತಿ ಇಲಾಖೆ.
4. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ,
5. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ,
6. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮಟ್ಟದ ತಾಲ್ಲೂಕು ನೋಡಲ್ ಅಧಿಕಾರಿಗಳು,
7. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಂಬಂಧಪಟ್ಟ ತಾಲ್ಲೂಕಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ,
8. ನಿರ್ದೇಶಕರು, ದಿ ನಡ್ಜ್ ಫೌಂಡೇಷನ್ ಸಂಸ್ಥೆ ಬೆಂಗಳೂರು, ನಡ್ಜ್‌ವಿಲ್ಲೆ, ಸಿ-೨, 1ನೇ 'ಸಿ' ಮುಖ್ಯ ರಸ್ತೆ, ಎಂಸಿಹೆಚ್‌ಎಸ್ ಕಾಲೋನಿ, ಸೆಕ್ಟರ್-6, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು-560102.
9. ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ಪ್ರಾಂಶುಪಾಲರು ಕೈಗಾರಿಕಾ ತರಬೇತಿ ಕೇಂದ್ರ,

**ಪ್ರತಿಯನ್ನು :**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
2. ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ.
6. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3&9),ವಿಧಾನ ಸೌಧ, ಬೆಂಗಳೂರು
7. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ

9. ಮಿಷನ್ ನಿರ್ದೇಶಕರು, ಸಂಜೀವಿನಿ – ಕೆ.ಎಸ್.ಆರ್.ಎಲ್.ಪಿ.ಎಸ್.
10. ಮುಖ್ಯ ಯೋಜನಾಧಿಕಾರಿಗಳು, ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ (ಯುಪಿಎಎಂಯು)
11. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಸಂಜೀವಿನಿ– ಕೆ.ಎಸ್.ಆರ್.ಎಲ್.ಪಿ.ಎಸ್. (ಸ್ಕಿಲ್ಸ್).
12. ಕೌಶಲ್ಯಾಭಿವೃದ್ಧಿ ತರಬೇತಿಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
13. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
15. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವಿಕಾಸ ಸೌಧ.
16. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ -1

2017-18ರಲ್ಲಿ CMKKYಯಡಿ ನೆಟ್ ಫೌಂಡೇಶನ್ ಬೆಂಗಳೂರು ಇವರು ವೃತ್ತಿವಾರು ತರಬೇತಿಗಳ ವಿವರ

| Sl No. | Sector | Name of QP | QP Ref Id | Edu Qualification | Estimated no. of students |
|---|---|---|---|---|---|
| 1 | Apparel, Made-Ups & Home Furnishing | Sewing Machine Operator | AMH/Q0301 | 5th Class ,Preferably | 500 |
| 2 | Automotive | Chauffeur / Taxi Driver | ASC/Q9714 | 8th Standard pass, preferably | 330 |
| 3 | Beauty & Wellness | Pedicurist and Manicurist | BWS/Q0402 | 5th Class | 210 |
| 4 | Banking, Financial Services and Insurance | Debt Recovery Agent | BSC/Q0701 | 10th Class | 600 |
| 5 | Banking, Financial Services and Insurance | Accounts Executive (Accounts Payable & Receivable) | BSC/Q0901 | Graduation in commerce or allied subjects/Diploma in commercial Practice | 500 |
| 6 | Construction | Assistant Electrician | CON/Q0602 | 10th Class | 330 |
| 7 | Healthcare | Home Health Aide | HSS/Q5102 | 10th Class preferably but Class VIII in certain cases | 250 |
| 8 | IT-ITES | CRM Domestic Non -Voice | SSC/Q2211 | 10th Class | 500 |
| 9 | IT-ITES | CRM Domestic Voice | SSC/Q2210 | 10th Class | 600 |
| 10 | Plumbing | Plumber (General) | PSC/Q0104 | 5th Class (To be revised to 10th post 31st December, 2017) | 210 |
| 11 | Retail | Retail Sales Associate | RAS/Q0104 | 10th Class | 400 |
| 12 | Telecom | Customer Care Executive (Call Centre) | TEL/Q0100 | 12th Class or equivalent. | 300 |
| 13 | Banking, Financial Services and Insurance | Accounts Executive (Recording, Reporting) | BSC/Q1001 | Graduation in commerce or allied subjects/Diploma in commercial Practice | 300 |
| 14 | Banking, Financial Services and Insurance | Accounts Executive (Payroll) | BSC/Q1201 | Graduation in commerce or allied subjects/Diploma in commercial Practice | 300 |
| 15 | Electronics & Hardware | Field Technician - AC | ELE/Q3102 | 8th Class+ 2 yrs | 160 |
| 16 | Electronics & Hardware | Field Technician – Refrigerator | ELE/Q3103 | 8th Class+ 2 yrs/10th | 160 |
| | | | | TOTAL | 5650 |

| Districts | Estimated no.of students |
|---|---|
| Bangalore Urban | 3100 |
| Bellary | 400 |
| Belgaum | 490 |
| Dakshina Karnataka | 420 |
| Mysore | 360 |
| Gulbarga | 310 |
| Tumkur | 290 |
| Dharwad | 280 |
| TOTAL | 5650 |

ಸರ್ಕಾರದ ಅಧೀನ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ
ವಿಕಾಸ ಸೌಧ, ಬೆಂಗಳೂರು